KAUP330031842022

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕುಂದಾಪುರ**

**ದಿನಾಂಕಃ 13 ನೇ ಫೆಬ್ರವರಿ – 2024**

**- ಉಪಸ್ಥಿತರು -**

**ಶ್ರೀಮತಿ. ರೋಹಿಣಿ.ಡಿ ಬಿ.ಎ., ಎಲ್.ಎಲ್.ಬಿ.,**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಂದಾಪುರ.**

## ಸಿ.ಸಿ. ಸಂಖ್ಯೆ: 2387/2022

**ಫಿರ್ಯಾದುದಾರರುಃ** ಸರ್ಕಾರದ ಪರವಾಗಿ ಗಂಗೊಳ್ಳಿ ಠಾಣಾ ಪೋಲೀಸರು,
(ಪ್ರತಿನಿಧಿಸಿದವರು - ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

**ಆರೋಪಿಗಳು** ಇರ್ಫಾನ್ ಸತ್ತರ್,
ವಯಸ್ಸು ಸುಮಾರು 39 ವರ್ಷ,
ತಂದೆಃ ಅಬ್ದುಲ್ ಸತ್ತರ್,
ವಾಸಃ ಎಸ್.ಆರ್.ಐ. ಮಂಜಿಲ್,
6 ನೇ ತಿರುವು, ಗೋಪಾಲಪುರ,
ಸಂತೇಕಟ್ಟೆ, ಉಡುಪಿ.

(ಪ್ರತಿನಿಧಿಸಿದವರು – ಶ್ರೀ ಬಿ.ಆರ್.ಎನ್. ವಕೀಲರು)

**ದಿನಾಂಕಗಳು ಃ-**

| | |
|---|---|
| **ಘಟನೆ ಸಂಭವಿಸಿದ ದಿನಾಂಕ** | ಃ 29.07.2018 ರಿಂದ 08.07.2022 |
| **ಅಂತಿಮ ವರದಿ ಸಲ್ಲಿಸಿದ ದಿನಾಂಕ** | ಃ 12.09.2022 |
| **ವಿಚಾರಣೆ ಪ್ರಾರಂಭವಾದ ದಿನಾಂಕ** | ಃ 18.01.2024 |
| **ವಿಚಾರಣೆ ಕೊನೆಗೊಂಡ ದಿನಾಂಕ** | ಃ 25.01.2024 |

| | |
|---|---|
| **ಅಪರಾಧದ ಸ್ವರೂಪ** | ಃ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಹಾಗೂ ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3, 4 ರ ರಿತ್ಯಾ |
| **ನ್ಯಾಯಾಧೀಶರ ಅಭಿಪ್ರಾಯ** | ಃ **ಅಂತಿಮ ಆದೇಶದಂತೆ** |

**- ಃ ತೀರ್ಪು ಃ -**

ಗಂಗೊಳ್ಳಿ ಠಾಣಾ ಆರಕ್ಷಕ ಉಪ ನಿರೀಕ್ಷಕರು ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಹಾಗೂ ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3, 4 ಡಿ.ಪಿ. ಆ್ಯಕ್ಟ ರಡಿಯಲ್ಲಿ ಅಪರಾಧವೆಸಗಿರುವುದಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ**

ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಉಡುಪಿ ಸಂತೆಕಟ್ಟೆಯ ಗೋಪಾಲಪುರದ ನಿವಾಸಿ ಎಸ್.ಆರ್.ಐ. ಮಂಜಿಲನ ಅಬ್ದುಲ್ ಸತ್ತಾರ್ ನ ಮಗ ಇರ್ಫಾನ ಸತ್ತಾರ್ ಎಂಬವನೊಂದಿಗೆ ತ್ರಾಸಿ ಗ್ರಾಮದ ಕ್ಲಾಸಿಕ್ ಆಡಿಟೋರಿಯಂನಲ್ಲಿ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ಪೂರ್ವ 2 ವರ್ಷದ ಹಿಂದೆ ಹುಡುಗನ ಮನೆಯವರು ಮದುವೆ ಬಗ್ಗೆ ಮಾತುಕತೆ ಮಾಡಿದ್ದು, ನಂತರ ಆಪಾದಿತನು ಸಾಕ್ಷಿ1 ನೇಯವರ ಮನೆಗೆ ಬಂದು ಮದುವೆಯ ಬಗ್ಗೆ ವರದಕ್ಷಿಣೆಯಾಗಿದ 30 ಪವನ್ ಚಿನ್ನಾಭರಣವನ್ನು ಬೇಡಿಕೆ ಇಟ್ಟಿದ್ದು, ಅದಕ್ಕೆ ಸಾಕ್ಷಿ 3 ನೇಯವರು ಒಪ್ಪದೇ 15 ಪವನ್ ಚಿನ್ನಾಭರಣವನ್ನು ಹಾಕಲು ಒಪ್ಪಿ ಮದುವೆ ಸಮಯ ಸಾಕ್ಷಿ 1 ನೇಯವರಿಗೆ ಹಾಕಿರುತ್ತಾರೆ. ಮದುವೆಯ ನಂತರ ಸಾಕ್ಷಿ1 ನೇಯವರು ಆಪಾದಿತನ ಮನೆಯಲ್ಲಿರುವಾಗ ಆಪಾದಿತನು ನೀನು ತವರಿನಿಂದ ತಂದ ಚಿನ್ನಾಭರಣ ತೀರಾ ಕಡಿಮೆಯಾಯಿತು ಎಂದು ಮೂದಲಿಸಿ ತಾತ್ಸಾರ ಮಾಡುತ್ತಿದ್ದುದಲ್ಲದೇ ಹೆಚ್ಚಿನ ವರದಕ್ಷಿಣೆಯಾಗಿ ಹೆಚ್ಚುವರಿ ಚಿನ್ನವನ್ನು ತರುವಂತೆ ಬೇಡಿಕೆ ಇಟ್ಟಿದ್ದಲ್ಲದೆ ಸಾಕ್ಷಿ1 ನೇಯವರಿಗೆ ಬೇವರ್ಸಿ ರಂಡೆ, ನೀನು ನರಕಕ್ಕೆ ಹೋಗು ಎಂಬುದಾಗಿ ಅವಾಚ್ಯ ಶಬ್ದಗಳಿಂದ ಬೈದು ಕುತ್ತಿಗೆಯನ್ನು ಒತ್ತಿ ಹಿಡಿದು ಈ ಬಗ್ಗೆ ಮನೆಯವರಿಗೇನಾದರೂ ತಿಳಿಸಿದರೆ ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದಲ್ಲದೆ ದಿ.14.06.2022 ರಂದು ವಿದೇಶದಿಂದ ಪುನಃ ಊರಿಗೆ ಬಂದಾಗ ನೀನು ಈ ಮನೆಗೆ ಬರುವುದು ಬೇಡ ಎಂದು

ಬೆದರಿಕೆ ಹಾಕಿ ದಿ. **08.07.2022** ರಂದು ಸಂತೆಕಟ್ಟೆ ಮನೆಯಿಂದ ಹೊರಗೆ ಹಾಕಿ ತವರು ಮನೆಗೆ ಕಳುಹಿಸಿರುವುದಾಗಿದೆ. ಎಂದು ಆಪಾದಿಸಿ ಈ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಈ ನ್ಯಾಯಾಲಯವು ಘಟನೆ ನಡಿಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದುಕೊಂಡು, ಆರೋಪಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸ್ ನ್ನು ಹೊರಡಿಸಿದ್ದು, ಆರೋಪಿಯು ದಿ. **03.01.2024** ರಂದು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಹೊಂದಿರುತ್ತಾರೆ. ಆರೋಪಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ **207** ರ ರೀತಿ ಅಗತ್ಯ ಪಡಿಸಿರುವಂತೆ ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಕಲಂ **498(ಎ), 504, 506** ಹಾಗೂ ವರದಕ್ಷಿಣೆ ನಿಷೇಧ ಕಾಯಿದೆ ಕಲಂ **3, 4** ರೀತ್ಯಾ ಆರೋಪಗಳಿಗೆ ಅವರ ವಿರುದ್ಧ ದೋಷಾರೋಪಣೆಯನ್ನು ರಚಿಸಿ ಓದಿ ವಿವರಿಸಲಾಗಿ ಆರೋಪಿಯು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದು ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

**4.** ತಮ್ಮ ಪ್ರಕರಣವನ್ನು ಬೆಂಬಲಿಸಿ, ಅಭಿಯೋಜನೆಯವರು ಫಿರ್ಯಾದುದಾರರಾದ ಅ.ಸಾ. **1** ರವರನ್ನು ಮತ್ತು ಸಾಕ್ಷಿದಾರರಾದ ಅ.ಸಾ. **2** ರಿಂದ **4** ರವರನ್ನು ವಿಚಾರಣೆ ಮಾಡಿಕೊಂಡು ನಿ.ಪಿ. **1** ರಿಂದ **9** ರಂತೆ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಅಸಾ. **1** ರಿಂದ **4** ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈ ಬಿಡಲಾಗಿದೆ.

**5.** ವಾದವನ್ನು ಆಲಿಸಿ ಕಡತವನ್ನು ಪರಿಶೀಲಿಸಿ ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಲಯದ ನಿರ್ಣಯಕ್ಕೆ ಬಂದಿರುತ್ತವೆ.

## ಅಂಶಗಳು

1. ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಆರೋಪಿಯೊಂದಿಗೆ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ಪೂರ್ವ 2 ವರ್ಷದ ಹಿಂದೆ ಹುಡುಗನ ಮನೆಯವರು ಮದುವೆ ಬಗ್ಗೆ ಮಾತುಕತೆ ಮಾಡಿದ್ದು, ನಂತರ ಆಪಾದಿತನು ಸಾಕ್ಷಿ1 ನೇಯವರ ಮನೆಗೆ ಬಂದು ಮದುವೆಯ ಬಗ್ಗೆ ವರದಕ್ಷಿಣೆಯಾಗಿ 30 ಪವನ್ ಚಿನ್ನಾಭರಣವನ್ನು ಬೇಡಿಕೆ ಇಟ್ಟಿದ್ದು, ಅದಕ್ಕೆ ಸಾಕ್ಷಿ 3 ನೇಯವರು ಒಪ್ಪದೇ 15 ಪವನ್ ಚಿನ್ನಾಭರಣವನ್ನು ಹಾಕಲು ಒಪ್ಪಿ ಮದುವೆ ಸಮಯ ಸಾಕ್ಷಿ 1 ನೇಯವರಿಗೆ ಹಾಕಿರುತ್ತಾರೆ. ಮದುವೆಯ ನಂತರ ಸಾಕ್ಷಿ1 ನೇಯವರು ಆಪಾದಿತನ ಮನೆಯಲ್ಲಿರುವಾಗ ಆಪಾದಿತನು ನೀನು ತವರಿನಿಂದ ತಂದ ಚಿನ್ನಾಭರಣ ತೀರಾ ಕಡಿಮೆಯಾಯಿತು ಎಂದು ಮೂದಲಿಸಿ ತಾತ್ಸಾರ ಮಾಡುತ್ತಿದ್ದುದಲ್ಲದೇ ಹೆಚ್ಚಿನ ವರದಕ್ಷಿಣೆಯಾಗಿ ಹೆಚ್ಚುವರಿ ಚಿನ್ನವನ್ನು ತರುವಂತೆ ಬೇಡಿಕೆ ಇಟ್ಟಿದ್ದಲ್ಲದೆ ಸಾಕ್ಷಿ1 ನೇಯವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಬೆದರಿಕೆ ಹಾಕಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 498(ಎ) ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

2. ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಅರೋಪಿಯೊಂದಿಗೆ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ನಂತರ ಸಾಕ್ಷಿ1 ನೇಯವರಿಗೆ ಮೂದಲಿಸಿ ತಾತ್ಸಾರ ಮಾಡುತ್ತಿದ್ದುದಲ್ಲದೇ ಬೇವರ್ಸಿ ರಂಡೆ, ನೀನು ನರಕಕ್ಕೆ ಹೋಗು ಎಂಬುದಾಗಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

3. ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಆರೋಪಿತರೊಂದಿಗೆ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ನಂತರ ಅವಾಚ್ಯ ಶಬ್ದಗಳಿಂದ ಬೈದು ಕುತ್ತಿಗೆಯನ್ನು ಒತ್ತಿ ಹಿಡಿದು ಈ ಬಗ್ಗೆ ಮನೆಯವರಿಗೇನಾದರೂ ತಿಳಿಸಿದರೆ ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿ ದಿ.14.06.2022 ರಂದು ವಿದೇಶದಿಂದ

ಪುನಃ ಊರಿಗೆ ಬಂದಾಗ ನೀನು ಈ ಮನೆಗೆ ಬರುವುದು ಬೇಡ ಎಂದು ಬೆದರಿಕೆ ಹಾಕಿ ದಿ. 08.07.2022 ರಂದು ಸಂತೆಕಟ್ಟೆ ಮನೆಯಿಂದ ಹೊರಗೆ ಹಾಕಿ ತವರು ಮನೆಗೆ ಕಳುಹಿಸಿ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ರ ದಂಡನೀಯವಾದ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿದೆಯೇ?

4. ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಆರೋಪಿತರೊಂದಿಗೆ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ಪೂರ್ವದಲ್ಲಿ ಆರೋಪಿಯು ವರದಕ್ಷಿಣೆಯಾಗಿ 30 ಪವನ್ ಚಿನ್ನವನ್ನು ಬೇಡಿಕೆ ಇಟ್ಟಿದ್ದು, ಆ ಮೂಲಕ ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಆರೋಪಿತರೊಂದಿಗೆ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ನಂತರ ಆಪಾದಿತನು ಚಾ.ಸಾ.1 ನೇ ಯವರಿಂದ ವರದಕ್ಷಿಣೆ ರೂಪದಲ್ಲಿ ಪಡೆದ ಹಣವನ್ನು ಸಾಕ್ಷಿ 1 ನೆಯವರಿಗೆ ಮದುವೆಯ ನಂತರದಲ್ಲಿ ವರ್ಗಾಯಿಸಿರುವುದಿಲ್ಲ ಹಾಗೂ ಸಾಕ್ಷಿ 1 ನೆಯವರಿಗೆ ವ್ಯಯ ಮಾಡಿರುವುದಿಲ್ಲ, ಆ ಮೂಲಕ ವರದಕ್ಷಿಣೆ ನಿಷೇಧ ಕಾಯಿದೆ ಕಲಂ 4 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಹಾಗಿದ್ದರೆ ಯಾವ ಆದೇಶ?

6. ಮೇಲೆನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಮುಂದಿನ ಕಾರಣಗಳಿಗಾಗಿ ಈ ಕೆಳಕಂಡತಿವೆ.

ಅಂಶ, 1 ರಿಂದ 5 : ನಕಾರಾತ್ಮಕವಾಗಿ

ಅಂಶ, 5 : ಅಂತಿಮ ಆದೇಶದಂತೆ.

<u>ಕಾರಣಗಳು</u>

<u>7. ಅಂಶ 1 ರಿಂದ 5:</u> ಪ್ರಕರಣದ ವಾಸ್ತವಾಂಶಗಳ ನಿರೂಪಣೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅಂಶ 1 ರಿಂದ 5 ನ್ನು ಜೊತೆಯಾಗಿ ಚರ್ಚಿಸಲು ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ:

ಗಂಗೊಳ್ಳಿ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಸಾಕ್ಷಿ1 ನೇಯವರಿಗೆ ಉಡುಪಿ ಸಂತೆಕಟ್ಟೆಯ ಗೋಪಾಲಪುರದ ನಿವಾಸಿ ಎಸ್.ಆರ್.ಐ. ಮಂಜಿಲನ ಅಬ್ದುಲ್ ಸತ್ತಾರ್ ನ ಮಗ ಇರ್ಫಾನ ಸತ್ತಾರ್ ಎಂಬವನೊಂದಿಗೆ ತ್ರಾಸಿ ಗ್ರಾಮದ ಕ್ಲಾಸಿಕ್ ಆಡಿಟೋರಿಯಂನಲ್ಲಿ ದಿ. 29.07.2018 ರಂದು ಮುಸ್ಲಿಂ ಧಾರ್ಮಿಕ ಪದ್ಧತಿಯಂತೆ ವಿವಾಹವಾಗಿದ್ದು ಮದುವೆಯ ಪೂರ್ವ 2 ವರ್ಷದ ಹಿಂದೆ ಹುಡುಗನ ಮನೆಯವರು ಮದುವೆ ಬಗ್ಗೆ ಮಾತುಕತೆ ಮಾಡಿದ್ದು, ನಂತರ ಆಪಾದಿತನು ಸಾಕ್ಷಿ1 ನೇಯವರ ಮನೆಗೆ ಬಂದು ಮದುವೆಯ ಬಗ್ಗೆ ವರದಕ್ಷಿಣೆಯಾಗಿದ 30 ಪವನ್ ಚಿನ್ನಾಭರಣವನ್ನು ಬೇಡಿಕೆ ಇಟ್ಟಿದ್ದು, ಅದಕ್ಕೆ ಸಾಕ್ಷಿ 3 ನೇಯವರು ಒಪ್ಪದೇ 15 ಪವನ್ ಚಿನ್ನಾಭರಣವನ್ನು ಹಾಕಲು ಒಪ್ಪಿ ಮದುವೆ ಸಮಯ ಸಾಕ್ಷಿ 1 ನೇಯವರಿಗೆ ಹಾಕಿರುತ್ತಾರೆ. ಮದುವೆಯ ನಂತರ ಸಾಕ್ಷಿ1 ನೇಯವರು ಆಪಾದಿತನ ಮನೆಯಲ್ಲಿರುವಾಗ ಆಪಾದಿತನು ನೀನು ತವರಿನಿಂದ ತಂದ ಚಿನ್ನಾಭರಣ ತೀರಾ ಕಡಿಮೆಯಾಯಿತು ಎಂದು ಮೂದಲಿಸಿ ತಾತ್ಸಾರ ಮಾಡುತ್ತಿದ್ದುದಲ್ಲದೇ ಹೆಚ್ಚಿನ ವರದಕ್ಷಿಣೆಯಾಗಿ ಹೆಚ್ಚುವರಿ ಚಿನ್ನವನ್ನು ತರುವಂತೆ ಬೇಡಿಕೆ ಇಟ್ಟಿದ್ದಲ್ಲದೆ ಸಾಕ್ಷಿ1 ನೇಯವರಿಗೆ ಬೇವರ್ಸಿ ರಂಡೆ, ನೀನು ನರಕಕ್ಕೆ ಹೋಗು ಎಂಬುದಾಗಿ ಅವಾಚ್ಯ ಶಬ್ದಗಳಿಂದ ಬೈದು ಕುತ್ತಿಗೆಯನ್ನು ಒತ್ತಿ ಹಿಡಿದು ಈ ಬಗ್ಗೆ ಮನೆಯವರಿಗೇನಾದರೂ ತಿಳಿಸಿದರೆ ನಿನ್ನನ್ನು ಕೊಲ್ಲದೇ ಬಿಡುವುದಿಲ್ಲ ಎಂದು ಜೀವಬೆದರಿಕೆ ಹಾಕಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಿದ್ದಲ್ಲದೆ ದಿ.14.06.2022 ರಂದು ವಿದೇಶದಿಂದ ಪುನಃ ಊರಿಗೆ ಬಂದಾಗ ನೀನು ಈ ಮನೆಗೆ ಬರುವುದು ಬೇಡ ಎಂದು ಬೆದರಿಕೆ ಹಾಕಿ ದಿ. 08.07.2022 ರಂದು ಸಂತೆಕಟ್ಟೆ ಮನೆಯಿಂದ ಹೊರಗೆ ಹಾಕಿ ತವರು ಮನೆಗೆ ಕಳುಹಿಸಿರುವುದಾಗಿದೆ. ಎಂಬುದು ಅಭಿಯೋಜನೆಯ ನಿಲುವಾಗಿರುತ್ತದೆ.

8. ಅ.ಸಾ. 1 ಶ್ರೀಮತಿ ಹೀನಾ ಕೌಸರ್ ರವರು ಪಿರ್ಯಾದು ಹಾಗೂ ಸ್ಥಳ ಮಹಜರು ಸಾಕ್ಷಿಧಾರರಾಗಿದ್ದು ತನ್ನ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ "**ನನ್ನ ಮತ್ತು ಆರೋಪಿಯ ಮದುವೆಯು ದಿಃ 29-07-2018 ರಂದು ತ್ರಾಸಿಯ ಕ್ಲಾಸಿಕ್ ಆಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಹೆಚ್ಚಿನ ವರದಕ್ಷಿಣೆಗಾಗಿ ನನಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಆರೋಪಿಯ ವಿರುದ್ದ ಯಾವುದೇ ದೂರನ್ನು ನೀಡಿಲ್ಲ. ನನ್ನ ಮತ್ತು ಆರೋಪಿಯ**

ನಡುವೆ ಸಣ್ಣಪುಟ್ಟ ವಿಚಾರಕ್ಕೆ ಮನಸ್ತಾಪವಾಗಿದ್ದು, ನಾನು ಪೊಲೀಸರ ಬಳಿ ಹೋದಾಗ ಕೆಲವು ದಾಖಲೆಗಳಿಗೆ ನನ್ನ ಸಹಿ ಪಡೆದಿದ್ದರು. ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ ಮತ್ತು ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ." ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

9. ಅ.ಸಾ.2 ರೆಹನ್ ಅಹಮ್ಮದ್ ರವರು ಪಿರ್ಯಾದುದಾರರ ಪಿರ್ಯಾದುದಾರರ ಅಣ್ಣ ಮತ್ತು ಹೇಳಿಕೆ ನೀಡಿದ ಸಾಕ್ಷಿಧಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ **"ಚಾಸಾ-1 ಮತ್ತು ಆರೋಪಿಯ ಮದುವೆಯು ದಿಃ 29-07-2018 ರಂದು ತ್ರಾಸಿಯ ಕ್ಲಾಸಿಕ್ ಅಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ಆರೋಪಿಯು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ."** ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

10. ಅ.ಸಾ.3 ಶಬೀನಾ ಅಕ್ತರ್ ರವರು ಪಿರ್ಯಾದುದಾರರ ಅಣ್ಣ ಮತ್ತು ಹೇಳಿಕೆ ನೀಡಿದ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ **"ಚಾಸಾ-1 ಮತ್ತು ಆರೋಪಿಯ ಮದುವೆಯು ದಿಃ 29-07-2018 ರಂದು ತ್ರಾಸಿಯ ಕ್ಲಾಸಿಕ್ ಅಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ಆರೋಪಿಯು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ."** ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

11. ಅ.ಸಾ.4 ನಾಜೀನಿನ್ ಬಾನು ರವರು ಪಿರ್ಯಾದುದಾರರ ಅತ್ತಿಗೆ ಮತ್ತು ಹೇಳಿಕೆ ನೀಡಿದ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ **"ಚಾಸಾ-1 ಮತ್ತು ಆರೋಪಿಯ ಮದುವೆಯು ದಿಃ 29-07-2018 ರಂದು ತ್ರಾಸಿಯ ಕ್ಲಾಸಿಕ್ ಅಡಿಟೋರಿಯಂನಲ್ಲಿ ಆಗಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿಯು ಯಾವುದೇ**

ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ. ಆರೋಪಿಯು ಚಾಸಾ-1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ." ಎಂದು ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

12. ಈ ಹಂತದಲ್ಲಿ ಈ ನ್ಯಾಯಾಲಯವು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ಕೆಳಕಂಡ ತೀರ್ಪಿನ ಮೇಲೆ ಅವಲಂಬಿಸಲು ಇಚ್ಚಿಸಿದ್ದು. ಈ ತೀರ್ಪಿನಲ್ಲಿ ಈ ಕೆಳಕಂಡಂತೆ ಗಮನಿಸಲಾಗಿರುತ್ತದೆ.

**1996(3) Crimes 84**

**Sathish Mehra Vs. Delhi Administration and another.**

> ***"When th judge is fairly certain that there is no prospect of the case ending in conviction the valuable time of the court should not be wasted for holding a trial only for the purpose of formally completing the procedure to pronounce the conclusion on the future Date"***

13. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಈ ಮೇಲ್ಕಂಡ ತೀರ್ಪಿನ ತತ್ವವು ಪ್ರಸ್ತುತ ಪ್ರಕರಣಕ್ಕೂ ಅನ್ವಯಿಸುತ್ತದೆ. ಅಭಿಯೋಜನೆಯು ಅ.ಸಾ. 1 ರಿಂದ 4 ನೇಯವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದರೂ ಸಹಾ ಸದರಿ ಸಾಕ್ಷಿದಾರರಿಂದ ಅಭಿಯೋಜನೆಯನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಿಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿರುವುದಿಲ್ಲವೆಂದು ಪರಿಗಣಿಸಲಾಗಿರುತ್ತದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಅ.ಸಾ. 1 ರಿಂದ 4 ನೇಯವರು ಅಭಿಯೋಜನೆಯನ್ನು ಬೆಂಬಲಿಸದೆ ಪ್ರತಿಕೂಲ ಹೊಂದಿದ್ದು ಇದು ಅಭಿಯೋಜನೆಗೆ ಅಘಾತಕಾರಿಯಾಗಿರುತ್ತದೆ. ಆದುದರಿಂದ ಅಭಿಯೋಜನಾ

ಪ್ರಕರಣದ ಬಗ್ಗೆ ಸಂಶಯ ಉದ್ಭವಿಸುತ್ತದೆ ಹಾಗೂ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇಲ್ಲವೆಂದು ಕಂಡುಬರುತ್ತದೆ. ಇದರಿಂದಾಗಿ ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎಂದು ನಿರ್ಣಯಿಸಿ, ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ರಿಂದ 5 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

14. **ಅಂಶ – 6:** ಮೇಲ್ಕಂಡ ಚರ್ಚೆಯಲ್ಲಿ ಅಂಶ 1 ರಿಂದ 5 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ ಆರೋಪಿಯು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು ಈ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 498(ಎ), 504, 506 ಹಾಗೂ ವರದಕ್ಷಿಣೆ ನಿಷೇಧ ಕಾಯಿದೆ ಕಲಂ 3 ಮತ್ತು 4 ರಡಿಯಲ್ಲಿನ ಆರೋಪಗಳಿಂದ ಆರೋಪಿಯನ್ನು ನಿರ್ದೋಷಿ ಎಂದು ತಿರ್ಮಾನಿಸಿ ಬಿಡುಗಡೆಗೆ ಆದೇಶಿಸಲಾಗಿದೆ.**

**ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ. ಕಲಂ 437(ಎ) ಪ್ರಕಾರ 6 ತಿಂಗಳವರೆಗೆ ಜಾರಿಯಲ್ಲಿರತಕ್ಕದೆಂದು ಆದೇಶಿಸಲಾಗಿದೆ.**

ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟಿದ್ದು ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 13 ನೇ ಫೆಬ್ರವರಿ 2024 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.

(ರೋಹಿಣಿ.ಡಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಕುಂದಾಪುರ.

:ಅನುಬಂಧ:

**1. ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:**

ಅ.ಸಾ. 1 : ಶ್ರೀಮತಿ ಹೀನಾ ಕೌಸರ್,

ಅ.ಸಾ. 2 : ರೆಹನ್ ಅಹ್ಮದ್,

ಅ.ಸಾ. 3 : ಶಬೀನಾ ಅಕ್ತರ್,

ಅ.ಸಾ. 4 : ನಜ್ನೀನಾ,

2. **ಅಭಿಯೋಜನೆಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ**

| | |
|---|---|
| ನಿ.ಪಿ. 1 | : ಪಿರ್ಯಾದು, |
| ನಿ.ಪಿ. 2 | : ಸ್ಥಳ ಮಹಜರು, |
| ನಿ.ಪಿ. 3 | : ಮಹಜರು, |
| ನಿ.ಪಿ. 4 | : ಸ್ವತ್ತು ಸ್ವಾಧೀನತಾ ಮಹಜರು, |
| ನಿ.ಪಿ. 5 ಮತ್ತು 6 | : ಭಾವಚಿತ್ರಗಳು, |
| ನಿ.ಪಿ. 7 | : ಅ.ಸಾ.2 ರವರ ಹೇಳಿಕೆ, |
| ನಿ.ಪಿ. 8 | : ಅ.ಸಾ.3 ರವರ ಹೇಳಿಕೆ, |
| ನಿ.ಪಿ. 9 | : ಅ.ಸಾ.3 ರವರ ಹೇಳಿಕೆ, |

3. **ಅಭಿಯೋಜನೆಯ ಪರ ಗುರ್ತಿಸಲಾದ ಮುದ್ದೆ ಮಾಲುಗಳ ಪಟ್ಟಿಃ**

- ಏನು ಇಲ್ಲ -

4. **ಆರೋಪಿಗಳ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿಃ**

- ಯಾರು ಇಲ್ಲ -

5. **ಆರೋಪಿಗಳ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿಃ**

- ಏನು ಇಲ್ಲಾ-

ROHINI D Digitally signed by ROHINI D Date: 2024.02.29 13:27:30 +0530

**(ರೋಹಿಣಿ.ಡಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಕುಂದಾಪುರ.**